2017 ಕ.ತೀ.ವ. 533

(ಕಲಬುರಗಿ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎ.ಎನ್. ವೇಣುಗೋಪಾಲ ಗೌಡ

## ಅನ್ನಪೂರ್ಣ –ವಿರುದ್ಧ– ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆ ಮತ್ತು ಇತರರು*

ಭಾರತ ಸಂವಿಧಾನ 226 ಮತ್ತು 227ನೇ ಅನುಚ್ಛೇದಗಳ ಅಡಿಯಲ್ಲಿ ರಿಟ್ ಅರ್ಜಿ.

4 ಮತ್ತು 5ನೇ ಎದುರುದಾರರಿಂದ ದಾಖಲು ಮಾಡಿದ ಪರಿಷ್ಕರಣಾ ಅರ್ಜಿಯನ್ನು ಪುರಸ್ಕರಿಸಿ ಆ ಮೂಲಕ, ಉಪವಿಭಾಗಾಧಿಕಾರಿಗಳು, ಲಿಂಗಸಗೂರು ಇವರು ಮಾಡಿದ ಆದೇಶವನ್ನು ರದ್ದುಗೊಳಿಸಿ ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆ ಇವರು ಮಾಡಿದ ಆದೇಶದ ವಿರುದ್ಧ ಈ ಅರ್ಜಿಯನ್ನು ಸಲ್ಲಿಸಲಾಗಿದೆ.

ಉಪವಿಭಾಗಾಧಿಕಾರಿ ನೀಡಿರುವ ಆದೇಶವು ಪ್ರೊಬೇಟ್ ಮಾಡಿದ ಉಯಿಲಿನ ಮೇಲೆ ಅವಲಂಬಿತವಾಗಿದ್ದು, ಅದು ಕಾಯಿದೆಯ ಕಲಂ 25ರ ಪುನರವಲೋಕನಾ ಅಧಿಕಾರ ವ್ಯಾಪ್ತಿಯನ್ನು ಮೀರಿದ್ದಾಗಿದುದರಿಂದ ಜಿಲ್ಲಾಧಿಕಾರಿಯವರು ಅರ್ಜಿದಾರರ ಪುನರವಲೋಕನಾ ಅರ್ಜಿಯನ್ನು ಪುರಸ್ಕರಿಸಿದ ಆದೇಶ ಕ್ರಮವು ಸರಿಯೆಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು ಸದರಿ ರಿಟ್ ಅರ್ಜಿಯನ್ನು ವಜಾಗೊಳಿಸಿದೆ.

*ಉಲ್ಲೇಖಿಸಲಾದ ಮೊಕದ್ದಮೆಗಳು:* *ಪ್ಯಾರಾಗಳಲ್ಲಿ*

*1. (2000) ಕೆಎಆರ್ ಎಲ್.ಜೆ. 391*
*ಸಿ.ಎನ್. ನಾಗೇಂದ್ರಸಿಂಗ್ –ವಿರುದ್ಧ–*
*ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ (ಉಲ್ಲೇ) 5*

* ರಿಟ್ ಅರ್ಜಿ ಸಂಖ್ಯೆ. 203678/2016, (ಕೆಎಲ್ಆರ್–ಆರ್ ಆರ್–ಎಸ್‌ಯುಆರ್), ದಿನಾಂಕ: 6ನೇ ಜನವರಿ, 2017

*2. ಎಐಆರ್ 1996 ಕೆಎಆರ್ 143*
*ಕರ್ನಾಟಕ ಸರ್ಕಾರ –ವಿರುದ್ಧ–*
*ಕರ್ನಾಟಕ ಅಪೀಲು ನ್ಯಾಯಾಧಿಕರಣ (ಉಲ್ಲೇ) 6*

ಅರ್ಜಿದಾರರ ಪರವಾಗಿ: ಶ್ರೀ ಚೈತನ್ಯ ಕುಮಾರ್ ಚಂದ್ರಿಕಿ, ವಕೀಲರು.
1 ರಿಂದ 3ನೇ ಪ್ರತ್ಯರ್ಜಿದಾರರ ಪರವಾಗಿ: ಶ್ರೀ ಶಿವಪುತ್ರ ಎಸ್ ಉದ್ಬುಲ್‌ಕರ್, ಹೆಚ್‌ಸಿಜಿಪಿ.

**ಆಜ್ಞೆ**

**ನ್ಯಾಯಮೂರ್ತಿ ಶ್ರೀ ಎ.ಎನ್. ವೇಣುಗೋಪಾಲ ಗೌಡ:**

4 ಮತ್ತು 5ನೇ ಎದುರುದಾರರಿಂದ ದಾಖಲು ಮಾಡಿದ ಪರಿಷ್ಕರಣಾ ಅರ್ಜಿಯನ್ನು ಪುರಸ್ಕರಿಸಿ ಆ ಮೂಲಕ, ಉಪವಿಭಾಗಾಧಿಕಾರಿಗಳು, ಲಿಂಗಸಗೂರು ಇವರು ಮಾಡಿದ ಆದೇಶವನ್ನು ರದ್ದುಗೊಳಿಸಿ ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆ ಇವರು ಮಾಡಿದ ಆದೇಶದ ವಿರುದ್ಧ ಈ ಅರ್ಜಿಯನ್ನು ಸಲ್ಲಿಸಲಾಗಿದೆ.

2. ಶ್ರೀಮತಿ ಶಂಕರಲಿಂಗಮ್ಮ, ಪತಿ ಮಲ್ಲಾರೆಡ್ಡಿ ಅಂದರೆ ಅರ್ಜಿದಾರ ಮತ್ತು 4 ಮತ್ತು 5ನೇ ಎದುರುದಾರರ ತಾಯಿಯ ಹೆಸರಿನಲ್ಲಿರುವ ತಿಮ್ಮಾಪುರ ಗ್ರಾಮ, ಸಿಂಧನೂರು ತಾಲ್ಲೂಕು, ರಾಯಚೂರು ಜಿಲ್ಲೆಯಲ್ಲಿರುವ ಸರ್ವೆ ನಂಬರ್ 79ನ್ನು ಹೊಂದಿದ 32 ಎಕರೆ ಮತ್ತು 20 ಗುಂಟೆಗಳು ಅಳತೆಯಿರುವ ಜಮೀನೆಂಬ ಮುಖ್ಯ ಸಂಗತಿಗಳು ವಿವಾದಿತವಾಗಿರುವುದಿಲ್ಲ. ಸದರಿ ಸ್ವತ್ತಿನ ಹಕ್ಕುಬದಲಾವಣೆಯು ದಿನಾಂಕ 8.2.1993ರಂದು ಜಾರಿಗೆ ಬಂದಿದೆ. ಶ್ರೀ ಮಹೇಶ್ ರೆಡ್ಡಿ, ಶ್ರೀಮತಿ ಶಂಕರಲಿಂಗಮ್ಮನ ಮತ್ತೊಬ್ಬ ಮಗನಾಗಿದ್ದು, ಅವಿವಾಹಿತನಾಗಿದ್ದು, ದಿನಾಂಕ 19.6.1996ರಂದು ಮೃತನಾಗಿದ್ದಾನೆ. ಸದರಿ ಸ್ವತ್ತಿನ ಸಂಬಂಧದಲ್ಲಿ ಹಕ್ಕು ಬದಲಾವಣೆಯನ್ನು ಅರ್ಜಿದಾರನ ಸಹೋದರರಾದ ಅಂದರೆ 4 ಮತ್ತು

5ನೇ ಎದುರುದಾರರ ಹೆಸರುಗಳಲ್ಲಿ ಜಾರಿಯಾಗಿದ್ದು, ಅಪೀಲನ್ನು, ಉಪವಿಭಾಗಾಧಿಕಾರಿ, ಲಿಂಗಸಗೂರು ಇವರ ಮುಂದೆ ದಾಖಲು ಮಾಡಲಾಗಿದೆ ಮತ್ತು ಆರ್.ಆರ್.ಟಿ/ಅಪೀಲು/251/2011–12ರಂತೆ ನೋಂದಾಯಿಸಲಾಗಿದೆ. ಸುನಾವಣೆಯ ತರುವಾಯ, ಪ್ರಕರಣವನ್ನು, ಪಕ್ಷಕಾರರು, ಸಿವಿಲ್ ನ್ಯಾಯಾಲಯದಲ್ಲಿ ವಿವಾದವನ್ನು ನ್ಯಾಯ ನಿರ್ಣಯ ಮಾಡಿ ಪಡೆದುಕೊಳ್ಳಲಾಗಿದೆಯೆಂದು ಅಭಿಪ್ರಾಯಪಟ್ಟ ಆದೇಶ ದಿನಾಂಕ 8.10.2012ರ ಮೂಲಕ ತಿರಸ್ಕರಿಸಲಾಗಿದೆ. ಅರ್ಜಿದಾರಳು, ಈ ಅರ್ಜಿಯನ್ನು ದಾಖಲು ಮಾಡಿದ್ದು, ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ 25ನೇ ಪ್ರಕರಣದ ಅಡಿಯಲ್ಲಿ (ಸಂಕ್ಷಿಪ್ತವಾಗಿ 'ಅಧಿನಿಯಮ') ಆರ್‌ಆರ್‌ಟಿ/ಅಪೀಲು/251/2012–13ರಂತೆ ಉಪ–ವಿಭಾಗಾಧಿಕಾರಿಗಳು, ಲಿಂಗಸಗೂರು ಇವರಿಂದ ನೋಂದಾಯಿಸಲಾಗಿದೆ. ಹೇಳಲಾದಂತೆ ಶ್ರೀಮತಿ ಶಂಕರಲಿಂಗಮ್ಮನ ಉಯಿಲನ್ನು ಉಲ್ಲೇಖ ಮಾಡುವುದರ ಮೂಲಕ ಆದೇಶ ದಿನಾಂಕ 26.6.2013ನ್ನು ಅನುಬಂಧ–ಎ ನಲ್ಲಿರುವಂತೆ ಮಾಡಿದ್ದು, ಈ ಮೂಲಕ ದಿನಾಂಕ 02.01.1983ರಂದು ಜಾರಿಯಾದ ಸ್ವತ್ತಿನ ಹಕ್ಕು ಬದಲಾವಣೆಯನ್ನು ರದ್ದು ಮಾಡಲಾಗಿದೆ ಮತ್ತು ಅರ್ಜಿದಾರಳ ಹೆಸರಿನಲ್ಲಿ ಮಾಡುವಂತೆ ಆದೇಶಿಸಲಾಗಿದೆ. ಸದರಿ ಆದೇಶವನ್ನು ಟೀಕಿಸಿದ್ದು, ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆ ಇವರ ಮುಂದೆ, ಈ ಅಧಿನಿಯಮದ 136ನೇ ಪ್ರಕರಣದಡಿಯಲ್ಲಿ, 4 ಮತ್ತು 5ನೇ ಎದುರುದಾರರು ಪರಿಷ್ಕರಣಾ ಅರ್ಜಿ ಸಂಖ್ಯೆ 31/2013–14ನ್ನು ದಾಖಲು ಮಾಡಿದ್ದು, ಅನುಬಂಧ–ಸಿ, ನಲ್ಲಿರುವಂತೆ ಆದೇಶ ದಿನಾಂಕ 17.06.2013ರ ಮೂಲಕ ಪುರಸ್ಕರಿಸಲಾಗಿರುವುದರಿಂದ ಈ ರಿಟ್ ಅರ್ಜಿಯನ್ನು ದಾಖಲು ಮಾಡಲಾಗಿದೆ.

3. 1ನೇ ಎದುರುದಾರರು, ನಿರಂಕುಶವಾಗಿ ವರ್ತಿಸಿದ್ದಾರೆ ಮತ್ತು ಕಾನೂನುಬಾಹಿರವಾಗಿ ಈ ಅರ್ಜಿಯನ್ನು ಪುರಸ್ಕರಿಸಿದ್ದಾರೆ ಹಾಗೂ 2ನೇ ಎದುರುದಾರರಿಂದ ಪರಿಷ್ಕರಣಾ ಅಧಿಕಾರವನ್ನು ಚಲಾಯಿಸಿ ಮಾಡಿದ ಆದೇಶವನ್ನು ರದ್ದುಗೊಳಿಸಲಾಗಿದೆಯೆಂದು ಮಾನ್ಯ ವಕೀಲರಾದ ಶ್ರೀ ಚೈತನ್ಯ ಕುಮಾರ್ ಸಿ.ಎಂ. ರವರು ವಾದಿಸಿದ್ದಾರೆ. 2ನೇ ಎದುರುದಾರರ ಸಮ್ಮತಿ ಮೇಲೆ

ಪರಿಷ್ಕರಣಾ ಅರ್ಜಿಯನ್ನು ಪುರಸ್ಕರಿಸಿರುವುದು 1ನೇ ಎದುರುದಾರರ ಮುಂದೆ ದಾಖಲು ಮಾಡಿದ ಪರಿಷ್ಕರಣಾ ಅರ್ಜಿಯು ಊರ್ಜಿತ ಯೋಗ್ಯವಾಗಿರುವುದಿಲ್ಲ, ಪ್ರಶ್ನಿತ ಆದೇಶದಲ್ಲಿ ಹಸ್ತಕ್ಷೇಪ ಮಾಡುವುದಕ್ಕೆ ಹೊಣೆಯಾಗುತ್ತದೆಂದು ಅವರು ವಾದವನ್ನು ಮಂಡಿಸಿದ್ದಾರೆ.

4. ದಾಖಲೆಯನ್ನು ಪರಿಶೀಲಿಸಲಾಗಿದೆ ಮತ್ತು ವಾದಗಳನ್ನು ಪರಿಗಣಿಸಲಾಗಿದೆ. *ಉಪವಿಭಾಗಾಧಿಕಾರಿಯು, ಈ ಅಧಿನಿಯಮದ 25ನೇ ಪ್ರಕರಣದಡಿಯಲ್ಲಿ ಅಧಿಕಾರವನ್ನು ಚಲಾಯಿಸಿ ಆ ವಿಷಯದಲ್ಲಿ ಕಾನೂನಿನ ಅನುಸಾರವಾಗಿ ಕಾರ್ಯ ನಿರ್ವಹಿಸಿದ್ದಾರೆಯೇ ಮತ್ತು ಅರ್ಜಿಯನ್ನು ಪುರಸ್ಕರಿಸಿರುವುದು ನ್ಯಾಯಸಮ್ಮತವಾಗಿದೆಯೇ? ಎಂಬ ಅಂಶವು ಇಲ್ಲಿ ಪರಿಗಣನೆಗಾಗಿ ಉದ್ಭವಿಸಿದೆ.*

5. ಆರ್‌ಆರ್‌ಟಿ/ಅಪೀಲು/251/2011–12ನ್ನು ದಾಖಲು ಮಾಡಲಾಗಿದೆ ಮತ್ತು ಹೇಳಲಾದ ಶ್ರೀಮತಿ ಶಂಕರಲಿಂಗಮ್ಮನ ಉಯಿಲು ಪತ್ರವನ್ನು ಉಲ್ಲೇಖಿಸಿ ಪರಿಹಾರೋಪಾಯಕ್ಕಾಗಿ ಕೋರಲಾಗಿದೆ. ಪಕ್ಷಕಾರರು, ಸಿವಿಲ್ ನ್ಯಾಯಾಲಯದಲ್ಲಿನ ವಿವಾದವನ್ನು ನ್ಯಾಯ ನಿರ್ಣಯ ಮಾಡಿ ಪಡೆದುಕೊಳ್ಳಲಾಗಿದೆಯೆಂದು ಅಭಿಪ್ರಾಯಪಟ್ಟು, ಅಪೀಲನ್ನು, ದಿನಾಂಕ 8.10.2012ರಂದು ತಿರಸ್ಕರಿಸಲಾಗಿದೆ. ಸದರಿ ಆದೇಶವನ್ನು, ***ಸಿ.ಎನ್. ನಾಗೇಂದ್ರಸಿಂಗ್ –ವಿರುದ್ಧ– ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ*** [1] ಪ್ರಕರಣದಲ್ಲಿ ಹೇಳಲಾದ ಕಾನೂನು ಅನುಪಾತದ ದೃಷ್ಟಿಯನ್ನಿಟ್ಟುಕೊಂಡು ಮಾಡಲಾಗಿದ್ದು, ಅದರಲ್ಲಿರುವಂತೆ ಪೂರ್ಣಪೀಠ, 127 ಮತ್ತು 129ನೇ ಪ್ರಕರಣದ ಉಪಬಂಧಗಳ ಅಡಿಯಲ್ಲಿ ಭೂ ಕಂದಾಯಾಧಿಕಾರಿಯ ವ್ಯಾಪ್ತಿ, ಅಧಿಕಾರ ಮತ್ತು ಅಧಿಕಾರ ವ್ಯಾಪ್ತಿಯನ್ನು ಉಲ್ಲೇಖಿಸಲಾಗಿದೆ ಮತ್ತು ಭೂ ಕಂದಾಯ ಅಧಿಕಾರಿಯು ಸಕ್ಷಮ ಅಧಿಕಾರಿಯಾಗಿ ವಿಚಾರಣೆ ನಡೆಸುವುದಕ್ಕೆ ಮತ್ತು ಈ ಅಧಿನಿಯಮದ 129ನೇ ಪ್ರಕರಣದ ಅಡಿಯಲ್ಲಿನ ವ್ಯವಹರಣೆಯಲ್ಲಿ ಉಯಿಲಿನ ನೈಜತೆಯನ್ನು ಪ್ರಶ್ನಿಸಿ ತೀರ್ಮಾನಿಸಲಾಗಿದ್ದು,

1. (2000) ಕೆಎಆರ್ ಎಲ್.ಜೆ.391

ಹಕ್ಕು ಬದಲಾವಣೆ, ಸಲಹೆ ಮತ್ತು ವಾದಿಸಿರುವಂತೆ ಉಯಿಲಿನ ಆಧಾರದ ಮೇಲೆ ಪರಿಣಾಮಕಾರಿಯಾಗಲಾರದೆಂದು ಅಭಿಪ್ರಾಯಪಟ್ಟಿದೆ.

6. ***ಕರ್ನಾಟಕ ಸರ್ಕಾರ –ವಿರುದ್ಧ– ಕರ್ನಾಟಕ ಅಪೀಲು ನ್ಯಾಯಾಧಿಕರಣ*** [2], ಆದೇಶದ ತಪ್ಪು ಸುಸ್ಪಷ್ಟವಾಗಿದೆ ಮತ್ತು ದಾಖಲೆ ಮೇಲೆಯೇ ತಪ್ಪು ಸ್ಪಷ್ಟವಾಗಿರುವುದರಿಂದ ಮತ್ತು ಅಂಥ ಆದೇಶವನ್ನು ಜಾರಿಯಲ್ಲಿ ಇರಲು ಅನುಮತಿಸಿದಲ್ಲಿ ಅದು ನ್ಯಾಯಾಲಯದ ಪ್ರಕ್ರಿಯೆಯು ನಿಂದನೆಯಲ್ಲಿ ಪರ್ಯಾವಸಾನಗೊಳ್ಳುತ್ತಿದೆ ಅಥವಾ ನ್ಯಾಯದ ತಪ್ಪು ಸಂದೇಶವು ರವಾನೆಯಾಗುತ್ತಿದೆ, ಅಧಿನಿಯಮದ 25ನೇ ಪ್ರಕರಣದ ಅಡಿಯಲ್ಲಿ ರೆವಿನ್ಯೂ ಕೋರ್ಟು, ಅದರ ಆದೇಶವನ್ನು ಪುನರವಲೋಕಿಸುವ ಅಥವಾ ವಾಪಸ್ಸು ತರಿಸಿಕೊಳ್ಳುವ ಅಧಿಕಾರವನ್ನು ಹೊಂದಿರುತ್ತದೆ ಎಂದು ಅಭಿಪ್ರಾಯಪಟ್ಟಿದೆ.

7. ಪ್ರಸ್ತುತ ಪ್ರಕರಣದಲ್ಲಿ, ಜಿಲ್ಲಾಧಿಕಾರಿಯು, ಆ ವಿಷಯದಲ್ಲಿ ದಾಖಲೆ ಮೇಲೆ ಅಥವಾ ಯಾವುದೇ ನ್ಯಾಯ ವಿಫಲತೆಯು ಆಗಿರುವುದಿಲ್ಲ. ಸ್ಪಷ್ಟವಾಗಿ ಕಂಡು ಹಿಡಿಯಲು ಉಪವಿಭಾಗಾಧಿಕಾರಿಯು ವಿಫಲವಾಗಿರುವುದನ್ನು ಎತ್ತಿ ಹಿಡಿದಿದ್ದಾರೆ. ಕೋರಿದ ಪುನರವಲೋಕನ ಸೋಗಿನಲ್ಲಿ, ಆರ್‌ಆರ್‌ಟಿ/ಅಪೀಲು/ 251/2012–13ರಂತೆ ನೋಂದಾಯಿಸುವ ಮೂಲಕ ಈ ಅಧಿನಿಯಮದ 25ನೇ ಪ್ರಕರಣದ ಅಡಿಯಲ್ಲಿ ಅರ್ಜಿಯನ್ನು ದಾಖಲು ಮಾಡಿ ಅರ್ಜಿದಾರನು ಈ ಪ್ರಕ್ರಿಯೆಯನ್ನು ದುರುಪಯೋಗಪಡಿಸಿಕೊಂಡಿರುವುದನ್ನು ಎತ್ತಿ ಹಿಡಿದಿದ್ದಾರೆ.

8. ಪುನರವಲೋಕನ ಅಧಿಕಾರವನ್ನು ಚಲಾಯಿಸುವುದಕ್ಕೆ ನಿಶ್ಚಿತ ಪರಿಮಿತಿಗಳಾಗಿವೆಯೆಂಬುದು ಕಾನೂನಿನಲ್ಲಿ ಸುಸ್ಥಾಪಿತವಾಗುವ ಸ್ಥಿತಿಯಾಗಿದೆ. ಪುನರವಲೋಕನ ಅಧಿಕಾರವನ್ನು, ಹೊಸದಾಗಿ ಕಂಡುಹಿಡಿಯುವುದರ ಮೇಲೆ ಚಲಾಯಿಸಬಹುದು ಮತ್ತು ಪ್ರಮುಖ ವಿಷಯವನ್ನು ಅಥವಾ ಅದರ ಸಾಕ್ಷ್ಯವನ್ನು,

2. ಎಐಆರ್ 1996 ಕೆಎಆರ್ 143

ಯುಕ್ತ ಶ್ರದ್ಧೆಯಿಂದ ಚಲಾಯಿಸಿದ ತರುವಾಯ ಪುನರವಲೋಕನಕ್ಕಾಗಿ ಕೋರಿದ ವ್ಯಕ್ತಿಗೆ ತಿಳುವಳಿಕೆಯಿಲ್ಲದೇ ಅಥವಾ ಆದೇಶವನ್ನು ಮಾಡಿದ ಸಮಯದಲ್ಲಿ ಅವನಿಂದ ಹಾಜರುಪಡಿಸಿದಲ್ಲಿ ಮಾಡಲಾಗುವುದಿಲ್ಲ; ರುಜುವಾತಾಗಿರುವ ದಾಖಲೆಯ ಮೇಲಿಂದಲೇ ಸ್ಪಷ್ಟವಾಗುವ ಕೆಲವೊಂದು ತಪ್ಪು ಅಥವಾ ಪ್ರಮಾದಗಳಾಗಿದ್ದರೂ ಚಲಾಯಿಸಬಹುದಾಗಿದೆ. ಯಾವುದೇ ಸಮಾನ ಕಾರಣದ ಮೇಲೆ ಸಹ ಚಲಾಯಿಸಬಹುದಾಗಿದೆ. ಆದಾಗ್ಯೂ, ಸರ್ವೋಚ್ಚ ನ್ಯಾಯಾಲಯದ ಅನೇಕ ತೀರ್ಮಾನಗಳಲ್ಲಿ ನೀಡಿರುವ ಸ್ಪಷ್ಟವಾದ ತೀರ್ಪುಗಳ ಬೆಳಕಿನಲ್ಲಿ ಪುನರವಲೋಕನ ಅಧಿಕಾರವನ್ನು ಗುಣಾವಗುಣಗಳ ಮೇಲೆ ತಪ್ಪಾದ ತೀರ್ಮಾನವೆಂದು ಅಂಥ ವಿಷಯವು, ಅಪೀಲು ನ್ಯಾಯಾಲಯದ ವ್ಯಾಪ್ತಿಯಲ್ಲಿರತಕ್ಕದ್ದು ಎಂಬ ಕಾರಣದ ಮೇಲೆ ಚಲಾಯಿಸಲಾಗದು.

9. ಪುನರವಲೋಕನವನ್ನು, ಈ ಪ್ರಕರಣದ ಮೊದಲನೇ ಸುನಾವಣೆಯೊಂದಿಗೆ ಸಮಾನೀಕರಿಸಲಾಗದು ಮತ್ತು ಅದನ್ನು ಸೋಗುಹಾಕಿದ ಅಪೀಲಿನಂತೆ ಅರ್ಥೈಸಲಾಗದು, ಈ ಮೂಲಕ, ತಪ್ಪು ತೀರ್ಮಾನವನ್ನು ಪುನಃ ಆಲಿಸಲಾಗಿದೆ ಮತ್ತು ಸರಿಪಡಿಸಲಾಗಿದೆ ಹಾಗೂ ಅದರ ಒಳಗೊಳಗೆ ತರ್ಕಬದ್ಧತೆ ಅಥವಾ ನ್ಯಾಯ ವಿಫಲತೆಯ ಪರಿಣಾಮವಾಗಿ ಆದೇಶದ ಮೇಲೆಯೇ ಮುಖ್ಯ ತಪ್ಪನ್ನು ಸುಸ್ಪಷ್ಟವಾಗಿ ತೋರಿಸಿದ್ದು ಮಾತ್ರ ಸುಳ್ಳಾಗಿದೆ. ಈ ಪ್ರಕರಣದ ದಾಖಲೆಯ ಪುನರ್ ವಿವೇಚನೆಯುನ್ನು ಪುನರವಲೋಕನ ಅಧಿಕಾರ ವ್ಯಾಪ್ತಿಯಂತೆ ಅನುಮತಿಸಲಾಗದು, ಹಾಗೆ ಮೂಲ ವ್ಯಾಪ್ತಿ ಅಥವಾ ಅಪೀಲು ಪ್ರಾಧಿಕಾರ ಪುನರವಲೋಕನಕ್ಕಾಗಿನ ಕಾರಣವಾಗದ ಆ ವಿಷಯದ ಮೇಲೆ ಕೇವಲ ಎರಡು ಅಭಿಪ್ರಾಯಗಳ ಸಾಧ್ಯತೆಯಂತೆ ಪುನರವಲೋಕನ ಅಧಿಕಾರವನ್ನು ಚಲಾಯಿಸಲು ಕ್ರಮ ಕೈಗೊಳ್ಳಲಾಗದು ಅದರ ವಾದವನ್ನು ಪುನರುಚ್ಚರಿಸಲಾಗಿದ್ದು, ಮೊದಲಿನಂತೆ ಅಂಗೀಕರಿಸಲಾಗದು, ಪುನರವಲೋಕನಾಧಿಕಾರ ವ್ಯಾಪ್ತಿಯಂತೆ ನಿರ್ಣಯಿಸಲಾದ ಪ್ರಕರಣವನ್ನು ಪುನಃ ಪ್ರಾರಂಭಿಸಲಾಗದಿದ್ದರೂ ಸಂಬಂಧಪಟ್ಟ ನ್ಯಾಯಾಧಿಕರಣದ ಮೂಲ ಅಥವಾ ಅಪೀಲು ಅಧಿಕಾರ ವ್ಯಾಪ್ತಿಯೊಳಗೆ ಸಮಾನೀಕರಿಸಲಾಗದು.

10. ಅನುಬಂಧ-ಎ ಯಲ್ಲಿ ಇರುವಂತೆ ಉಪವಿಭಾಗಾಧಿಕಾರಿಯು ಮಾಡಿದ ಆದೇಶವನ್ನು ಜಿಲ್ಲಾಧಿಕಾರಿಗಳ ಮುಂದೆ ದಾಖಲು ಮಾಡಿದ ಪರಿಷ್ಕರಣಾ ಅರ್ಜಿಯಲ್ಲಿ ಪ್ರಶ್ನಿಸಿದ್ದು, ಈ ಅಧಿನಿಯಮದ 25ನೇ ಪ್ರಕರಣದ ಅಡಿಯಲ್ಲಿನ ಉಪಬಂಧವನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿರುವುದು ಕೇವಲ ಪರಿಶೀಲನೆಯಿಂದ ಕಂಡು ಬರುತ್ತದೆ. ಉಪವಿಭಾಗಾಧಿಕಾರಿಯು, ಪಕ್ಷಕಾರರ ನಡುವೆ ವಾಸ್ತವಿಕ ವಿವಾದಕ್ಕೆ ಸಂಬಂಧಪಟ್ಟ ಮತ್ತು ವಿವಾದಿತ ಶ್ರೀಮತಿ ಶಂಕರಲಿಂಗಮ್ಮನ ಪ್ರಮಾಣಿತವಲ್ಲದ ಉಯಿಲಿನ ಆಧಾರದ ಮೇಲೆ ಕೋರಲಾದ ಪರಿಹಾರಕ್ಕೆ ಆರ್‌ಆರ್‌ಟಿ/ಅಪೀಲು/ 251/2011-12ರಲ್ಲಿ ದಿನಾಂಕ 8.10.2012ರಂದು, ತಿರಸ್ಕೃತ ಆದೇಶವನ್ನು ಹೊರಡಿಸಿದ್ದಾರೆ. ಅದೇ ಸಂಗತಿಗಳ ಪರಿಗಣನೆಯ ಮೇಲೆ ಅನುಬಂಧ-ಎ, ನಲ್ಲಿರುವ ಆದೇಶವನ್ನು ಈ ಅಧಿನಿಯಮದ 25ನೇ ಪ್ರಕರಣದ ಅಡಿಯಲ್ಲಿ ಚಲಾಯಿಸಿದ ಪುನರವಲೋಕನ ಪರಿಮಿತಿಗಳನ್ನು ಕಡೆಗಣಿಸಿ ಮಾಡಲಾಗಿದ್ದು, ಅರ್ಜಿದಾರನ ಕಾನೂನುಕ್ರಮವನ್ನು ದುರುಪಯೋಗಪಡಿಸಿಕೊಂಡಿದ್ದು ಜಿಲ್ಲಾಧಿಕಾರಿಗಳು, ಅನುಬಂಧ-ಸಿ, ಯಲ್ಲಿರುವ ಆದೇಶದ ಮೂಲಕ ಪರಿಷ್ಕರಣಾ ಅರ್ಜಿಯನ್ನು ಸರಿಯಾಗಿಯೇ ಪುರಸ್ಕರಿಸಿದ್ದಾರೆ. ಗುಣಾವಗುಣಗಳ ಮೇಲೂ ಸಹ, ಅನುಂಬಂಧ-ಎ, ನಲ್ಲಿರುವ ಆದೇಶವನ್ನು ***ಸಿ.ಎನ್. ನಾಗೇಂದ್ರ ಸಿಂಗ್*** ಪ್ರಕರಣದಲ್ಲಿ ಪೂರ್ಣ ಪೀಠ ಹೇಳಲಾದಂತೆ ಕಾನೂನು ಅನುಪಾತವನ್ನು ಕಡೆಗಣಿಸಿ ಮಾಡಿರುವ ನ್ಯಾಯಿಕ ಪರಿಶೀಲನೆಯು ಸಹಾ ಊರ್ಜಿತಯೋಗ್ಯವಾಗಿರುವುದಿಲ್ಲ.

ಈ ಮೇಲೆ ಹೇಳಿದ ಕಾರಣಗಳಿಗಾಗಿ, ಈ ಅರ್ಜಿಯು, ಯಾವುದೇ ಗುಣಾರ್ಹತೆಗಳಿಂದ ಕೂಡಿರುವುದಿಲ್ಲ ಮತ್ತು ಹಾಗಾಗಿ ಇದನ್ನು ತಿರಸ್ಕರಿಸಲಾಗಿದೆ. ಆದಾಗ್ಯೂ ಶ್ರೀಮತಿ ಶಂಕರಲಿಂಗಮ್ಮನ ವಿವಾದಿತ ಉಯಿಲನ್ನು ಉಲ್ಲೇಖಿಸುವುದರೊಂದಿಗೆ ಅಧಿಕಾರ ವ್ಯಾಪ್ತಿಯ ಸಿವಿಲ್ ನ್ಯಾಯಾಲಯದ ಮುಂದೆ ಅರ್ಜಿದಾರನು ಪರಿಹಾರೋಪಾಯ ಕೋರಲು ಸಹಾ ಅನುಬಂಧ-ಸಿ ನಲ್ಲಿರುವ ಆದೇಶವು ಸಮರ್ಥನೀಯವಲ್ಲವೆಂದು ಸ್ಪಷ್ಟಪಡಿಸಲಾಗಿದೆ.